30101(New)

(NEP)

B.A./B.S.W. I Semester Degree Examination, February/March - 2023

KANNADA (Basic) (New)

ಕನ್ನಡ ದೀಪ - 1

Time : 3 Hours | Maximum Marks : 60

*Instructions to Candidates:*

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

1. ಕನ್ನಡ ನಾಡು-ನುಡಿಗಳ ಪ್ರಾಚೀನತೆ ಕುರಿತು ಬರೆಯಿರಿ.

(ಅಥವಾ)

ಕರ್ನಾಟಕ ಏಕೀಕರಣ ಚಳುವಳಿ ಕುರಿತು ವಿವರಿಸಿರಿ. (10)

2. ಹೊಸಗನ್ನಡ ಕವಿತೆಗಳಲ್ಲಿ ಮೂಡಿಬಂದ ಪ್ರಕೃತಿಯ ಚೆಲುವಿನ ಕುರಿತು ವಿವರಿಸಿ.

(ಅಥವಾ)

'ಶ್ರಾವಣದ ವೈಭವ' ಮತ್ತು 'ನಿತ್ಯೋತ್ಸವ' ಕವಿತೆಗಳಲ್ಲಿ ಅಭಿವ್ಯಕ್ತಗೊಂಡ ಪ್ರಕೃತಿ ವರ್ಣನೆಯನ್ನು ಕುರಿತು ಬರೆಯಿರಿ. (10)

3. ಪಿತೃಪ್ರಧಾನ ವ್ಯವಸ್ಥೆಯ ಕರಾಳಮುಖವ ''ಹೆಜ್ಜೆಹಾದಿ'' ಪಠ್ಯದಲ್ಲಿ ಹೇಗೆ ಬಿಂಬಿತವಾಗಿದೆ ? ಲೇಖಕಿಯರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಿರಿ.

(ಅಥವಾ)

ಡಾ. ಬಿ.ಆರ್. ಅಂಬೇಡ್ಕರ ಅವರ ಜೀವನ ಮತ್ತು ಸಾಧನೆಯ ಕುರಿತು ''ಉದಯ'' ಪಠ್ಯಭಾಗದ ಮೂಲಕ ವಿವರಿಸಿರಿ. (10)

4. ಪ್ರಜಾಪ್ರಭುತ್ವ ಮತ್ತು ಜನತಂತ್ರ ವ್ಯವಸ್ಥೆಗೆ ಧಕ್ಕೆ ಬಂದು ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಎಂಬ ಹೇಳಿಕೆಯನ್ನು 'ಹೀಗೆ ಮುಂದುವರಿದರೆ' ಪಠ್ಯದ ಮೂಲಕ ವಿವೇಚಿಸಿರಿ.

(ಅಥವಾ)

ಭಾರತ ಸ್ವಾತಂತ್ರ್ಯದ ಹೋರಾಟ ಸಂದರ್ಭದಲ್ಲಿ ತಲೆದೋರಿದ ದೇಶವಿಭಜನೆ, ಕೋಮುಸಂಘರ್ಷ ಮತ್ತು ಅರಾಜಕತೆಯ ದಾರುಣತೆಯನ್ನು ''ರಾಗಂ'' ಅವರ ಮಾತುಗಳಲ್ಲಿ ವಿವರಿಸಿರಿ. (10)

[P.T.O.

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

i) ಕವಿರಾಜಮಾರ್ಗ

ii) ಲಕ್ಷ್ಮೀಧರ ಅಮಾತ್ಯನ ಶಾಸನ

iii) ಗರತಿಯ ಹಾಡುಗಳು

iv) ಹರ್ಡೇಕರ ಮಂಜಪ್ಪ

6. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಕನ್ನಡದ ಮೊಟ್ಟಮೊದಲ ಶಾಸನ ಯಾವುದು?

ii) ಬಾದಾಮಿ ಶಾಸನದಲ್ಲಿ ಉಲ್ಲೇಖಿತವಾದ ವೀರಯೋಧ ಯಾರು?

iii) 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಕವಿತೆಯನ್ನು ಬರೆದವರು ಯಾರು?

iv) 'ಕಾಣಿಕೆ'-ಕವಿತೆ ಯಾರದು?

v) 'ಕನ್ನಡ ಭಾಷೆ ಸುಲಿದ ಬಾಳೆಯ ಹಣ್ಣಿನಂತೆ' ಎಂದು ಹೇಳಿದ ಕವಿ ಯಾರು?

vi) 'ಶಾಂತ ಕವಿಗಳ' ಪೂರ್ಣ ಹೆಸರೇನು?

vii) ಸು.ರಂ. ಯಕ್ಕುಂಡಿಯವರ ಪತ್ರಕ್ಕಿರುವ ಕವಿತೆ ಯಾವುದು?

viii) ಎಚ್.ಜೆ. ಲಕ್ಕಪ್ಪಗೌಡ ಅವರು ಯಾವ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು.

ix) 'ಧನುರ್ಧಾರಿ' ವಾರಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?

x) 'ಸ್ತ್ರೀ-ಪುರುಷ ಸಮಾನತೆ' ಲೇಖನದ ಮೂಲ ಲೇಖಕರು ಯಾರು?

30122(New)

(NEP)

B.A./B.S.W. I Semester Degree Examination, February/March - 2023

KANNADA (Optional-II) (New)

# ಮಧ್ಯಕಾಲೀನ ಕನ್ನಡ ಸಾಹಿತ್ಯ

Paper : DSE-A-2

Time : 3 Hours Maximum Marks : 60

*Instructions to Candidates:*

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಆಯಾ ಪ್ರಶ್ನೆಗಳ ಪೂರ್ಣ ಅಂಕಗಳು.

1. ಮಧ್ಯಕಾಲೀನ ಕನ್ನಡ ಸಾಹಿತ್ಯ ಸ್ವರೂಪವು ತನ್ನ ಹರವನ್ನು ಮೈದಾಳಿದುದನ್ನು ವಿವರಿಸಿರಿ.

(ಅಥವಾ)

ಮಧ್ಯಕಾಲೀನ ಕನ್ನಡ ಸಾಹಿತ್ಯ ರೂಪಗಳ ಲಕ್ಷಣಗಳನ್ನು ವಿವರಿಸಿರಿ. (10)

2. ಅನುಭಾವಾಮೃತ ಚಿಂತನೆ ಹಿನ್ನಲೆಯಲ್ಲಿ ಬಸವಣ್ಣ ಸರ್ವಜ್ಞರ ವಿಚಾರಧಾರೆಗಳನ್ನು ತಿಳಿಸಿರಿ.

(ಅಥವಾ)

ಕನಕದಾಸರು ಮತ್ತು ಪುರಂದರದಾಸರ ಜೀವನ ಸಾಧನೆಗಳನ್ನು ನಿರೂಪಿಸಿರಿ. (10)

3. ನಡುಗನ್ನಡ ಸಾಹಿತ್ಯಕ್ಕೆ ಷಟ್ಪದಿ ಸಾಹಿತ್ಯ ಕವಿಗಳ ಕೊಡುಗೆಗಳನ್ನು ವಿವರಿಸಿರಿ.

(ಅಥವಾ)

ತಾತ್ವಿಕ ಹಿನ್ನಲೆಯಲ್ಲಿ ಅಕ್ಕಮಹಾದೇವಿಯ ವಚನಗಳನ್ನು ವಿವೇಚಿಸಿರಿ. (10)

4. ಹರಿಶ್ಚಂದ್ರನ ಸತ್ಯ-ನಿಷ್ಠೆಯಲ್ಲಿ ಚಂದ್ರಮತಿ ಅನುಭವಿಸಿದ ಯಾತನೆಯನ್ನು ಸಾದರಪಡಿಸಿರಿ.

(ಅಥವಾ)

ಯುದ್ಧದಲ್ಲಿ ಅರ್ಜುನನ ಸಾರಥಿಯಾಗಲು ಕೃಷ್ಣ ಒಪ್ಪಿಕೊಂಡ ಬಗೆಯನ್ನು ಚಿತ್ರಿಸಿರಿ. (10)

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

i) ಸಾಂಗತ್ಯ ಸಾಹಿತ್ಯ

ii) ಅಕ್ಕಮಹಾದೇವಿ

iii) ಕೃಷ್ಣ

iv) ಹರಿಹರ

[P.T.O.

6. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ''ಬೌದ್ಧರೆ ಕನ್ನಡ ಭಾಷೆಗೆ ಆದಿಕವಿಗಳು'' ಎಂದು ಹೇಳಿದವರು ಯಾರು?

ii) ರಗಳೆಯ ಸಮಾನಾರ್ಥಕ ಪದ ಯಾವುದು?

iii) ''ತೊರವೆ ರಾಮಾಯಣ'' ಯಾವ ಷಟ್ಪದಿ ಪ್ರಕಾರದಲ್ಲಿದೆ?

iv) ಸರ್ವಜ್ಞನ ಹುಟ್ಟೂರು ಯಾವುದು?

v) ಅಕ್ಕಮಹಾದೇವಿಯ ಒಂದು ವಚನಕ್ಕೆ ಆದ್ಯರ ಎಷ್ಟು ವಚನ ಸಮ?

vi) ಎಂಟು ಪದ್ಯಗಳಿಂದ ಕೂಡಿದ ಸಾಹಿತ್ಯ ರೂಪ ಯಾವುದು?

vii) ಚಾಮರಸ ಕವಿಯ ಜನ್ಮಸ್ಥಳ ಯಾವುದು?

viii) ''ಪೆಣ್ಣಲ್ಲವೇ ತಮ್ಮನ್ನೆಲ್ಲ ಹಡೆದ ತಾಯಿ'' ಹೇಳಿದವರು ಯಾರು?

ix) 'ಹಂಪೆಯರಸ ಕುಮಾರ' ಯಾರು?

x) 'ಬಿಸುಡದಿರು ಹಸುಳೆ ನೊಂದಹನೆಂದು' ಯಾರು ಹೇಳುತ್ತಾರೆ?

30121(New)

(NEP)

**B.A. I Semester Degree Examination, February/March - 2023**

**KANNADA (Optional) - I (New)**

**ಪ್ರಾಚೀನ ಕನ್ನಡ ಸಾಹಿತ್ಯ ಎ-1**

**Paper : DSE-1**

**Time : 3 Hours** **Maximum Marks : 60**

***Instructions to Candidates:***

1) ಭಾಷೆ ಹಾಗೂ ಬರಹ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

1. ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮವನ್ನು ಕುರಿತು ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಬರೆಯಿರಿ.

**(ಅಥವಾ)**

ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪ ಮತ್ತು ಪ್ರೇರಣೆಗಳನ್ನು ಕುರಿತು ಬರೆಯಿರಿ. **(10)**

2. ಕನ್ನಡ ಸಾಹಿತ್ಯದಲ್ಲಿ 'ವಡ್ಡಾರಾಧನೆ' ಕೃತಿಯ ಮಹತ್ವವನ್ನು ಚರ್ಚಿಸಿ ಬರೆಯಿರಿ.

**(ಅಥವಾ)**

ಹತ್ತನೆಯ ಶತಮಾನದ ಪ್ರಮುಖ ಕವಿಗಳಾದ ಪೊನ್ನ ಮತ್ತು ಚಾವುಂಡರಾಯರ ಕೃತಿಗಳ ಮಹತ್ವವನ್ನು ವಿಶದೀಕರಿಸಿ. **(10)**

3. ಕವಿರಾಜಮಾರ್ಗದ ಆಯ್ದ ಪದ್ಯಗಳಲ್ಲಿ ಕಂಡುಬರುವ ನಾಡು-ನುಡಿ, ಪ್ರಾಚೀನ ಇತಿಹಾಸ ಹೇಗೆ ಮೂಡಿ ಬಂದಿದೆ? ವಿವರಿಸಿ.

**(ಅಥವಾ)**

ಪಂಪಪೂರ್ವಯುಗದ ಮಹತ್ವದ ಶಾಸನವಾದ ಬಾದಾಮಿ ಶಾಸನದ ವೈಶಿಷ್ಟ್ಯವನ್ನು ಬರೆಯಿರಿ. **(10)**

4. ''ನೀರೊಳಗಿರ್ದುಂ ಬೆಮರ್ತನುರಗ ಪತಾಕಂ'' - ಪದ್ಯದ ಸ್ವಾರಸ್ಯವನ್ನು ಬರೆಯಿರಿ.

**(ಅಥವಾ)**

ಕಾರ್ತಿಕ ಋಷಿಯ ಹುಟ್ಟು ಮತ್ತು ಕೋಗಳಿಗೆ ಬಂದ ಪ್ರಸಂಗವನ್ನು ವಿವರಿಸಿ. **(10)**

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

i) ಪಂಪ

ii) ಹಲ್ಮಿಡಿ ಶಾಸನ

iii) ರನ್ನನ ಅಜಿತನಾಥ ಪುರಾಣ

iv) ಪ್ರಾಚೀನ ಅವಶೇಷಗಳು

[P.T.O.

6. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಧರ್ಮದ ಆಧಾರದ ಮೇಲೆ ಕನ್ನಡ ಸಾಹಿತ್ಯವನ್ನು ವಿಭಾಗಿಸಿದ ವಿದ್ವಾಂಸರಾರು?

ii) ತಮಿಳಿನ ಯಾವ ಕೃತಿಯಲ್ಲಿ 'ಕರುನಾಡರ್' ಎಂಬ ಪದ ಕಂಡು ಬರುತ್ತದೆ.

iii) 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಂ' ಎಂದು ಹೇಳಿದ ಕವಿ ಯಾರು?

iv) ಶಿವಕೋಟ್ಯಾಚಾರ್ಯರ ಜನ್ಮಸ್ಥಳ ಯಾವುದು?

v) 'ಕವಿರತ್ನ' ಎಂಬ ಬಿರುದು ಯಾವ ಕವಿಗೆ ಕೊಡಲಾಗಿದೆ.

vi) ಹಲ್ಮಿಡಿ ಶಾಸನವನ್ನು ಬೆಳಕಿಗೆ ತಂದ ವಿದ್ವಾಂಸರು ಯಾರು?

vii) ''ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ'' ಈ ಸಾಲು ಯಾವ ಶಾಸನದಲ್ಲಿ ಕಂಡುಬರುತ್ತದೆ?

viii) 'ಸರವಣ' ಪದದ ಅರ್ಥವೇನು?

ix) ಪಂಪನ ತಂದೆಯ ಹೆಸರೇನು?

x) 'ನೀರೊಳಗಿರ್ದುಂ ಬೆಮರ್ತನುರಗ ಪತಾಕಂ' - ಪ್ರಸ್ತುತ ವಾಕ್ಯ ಯಾವ ಕಾವ್ಯದಲ್ಲಿ ಕಂಡು ಬರುತ್ತದೆ.

---

32101 (New)

(NEP)

# B.Com./B.B.A. I Semester Degree Examination, February/March - 2023

## KANNADA (Basic) (New)

## ಕನ್ನಡ ಕುಸುಮ - 1

**Time : 3 Hours** **Maximum Marks : 60**

***Instructions to Candidates:***

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಪಂಪನಿಂದ ಆಧುನಿಕ ಕಾವ್ಯದವರೆಗೆ ಕನ್ನಡ ಸಾಹಿತ್ಯ ಬಹುಸಂಸ್ಕೃತಿಗಳಿಂದ ಕೂಡಿದೆ ಎನ್ನುವ ಮಾತನ್ನು ಕಮಲಾ ಹಂಪನ ತಮ್ಮ ಲೇಖನದಲ್ಲಿ ಹೇಗೆ ವಿವರಿಸಿದ್ದಾರೆ ?

(ಅಥವಾ)

ಗಡಿನಾಡ ಉಳಿವಿಗಾಗಿ ಜಯದೇವಿತಾಯಿ ಲಿಗಾಡೆ ಅವರ ಹೋರಾಟವನ್ನು ಅವರ ತ್ರಿಪದಿಗಳ ಹಿನ್ನೆಲೆಯಲ್ಲಿ ವಿವರಿಸಿರಿ. **(10)**

2. ಸಾಂಸ್ಕೃತಿಕ ಚಿಂತನೆಯ ಅಧ್ಯಯನ ಪರ ಕಾಳಜಿಯನ್ನು ಆರ್.ವಿ. ಭಂಡಾರಿ ಅವರ ಲೇಖನ ಹೇಗೆ ಸ್ಪಷ್ಟಪಡಿಸಿದೆ?

(ಅಥವಾ)

'ಸಾಮಾಜಿಕ ಬದುಕಿನ ಮೌಲ್ಯ, ಭಕ್ತಿಮುಕ್ತಿಗಳ ಸತ್ವ 'ಪುರಂದರದಾಸರ' ಕೀರ್ತನೆಗಳಲ್ಲಿ ಹೇಗೆ ಮೂಡಿ ಬಂದಿವೆ? ವಿವರಿಸಿರಿ. **(10)**

3. ಹೆಣ್ಣನ್ನು ಮಾರಾಟದ ವಸ್ತುವನ್ನಾಗಿ ಬಳಸಿಕೊಳ್ಳುತ್ತಿರುವ ದುರಂತವನ್ನು 'ಸರಕು ಮತ್ತು ಸಂಸ್ಕೃತಿ' ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿರಿ.

(ಅಥವಾ)

'ಸಿಂಹಾವಲೋಕನ' ಮತ್ತು 'ಸಮಯವಿದೆಯೇ ಪಪ್ಪಾ' ಕವಿತೆಗಳ ಭಾವಸೌಂದರ್ಯವನ್ನು ವಿವರಿಸಿರಿ. **(10)**

4. ಮಹಿಳೆಯರ ದೇಹದ ಮೇಲೆ ದುಷ್ಪರಿಣಾಮ ಬೀರುತ್ತಿರುವ 'ಆಧುನಿಕ ತಂತ್ರಜ್ಞಾನ'ಗಳನ್ನು ಕುರಿತು 'ಹೆಣ್ತನವೆಂಬ ಕಾಲನಿ' ಲೇಖನ ಹೇಗೆ ಸ್ಪಷ್ಟಪಡಿಸಿದೆ? ವಿವರಿಸಿ.

(ಅಥವಾ)

ಭ್ರೂಣಾವಸ್ಥೆಯಿಂದ ಸಮಾಧಿಯವರೆಗೆ ಕಲಿಯುವ ಪ್ರಕ್ರಿಯೆ ನಿರಂತರ ಎನ್ನುವ ಆಶಯ 'ಬದುಕು ನಮಗೇನು ಕಲಿಸಿದೆ' ಲೇಖನ ಹೇಗೆ ತಿಳಿಸುತ್ತದೆ. **(10)**

[P.T.O.

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

i) ಇಗೋ ಕನ್ನಡ

ii) ಆಯ್ದಕ್ಕಿ ಮಾರಯ್ಯ

iii) ಏನಾದರೂ ಮಾಡಿ ದೂರ ಬೇಡಿ

iv) ಕನಕದಾಸರು

6. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಓ.ಎಲ್. ನಾಗಭೂಷಣ ಅವರ ಜನ್ಮಸ್ಥಳ ಯಾವುದು?

ii) ಆಂಡಯ್ಯ ರಚಿಸಿದ ಕೃತಿ ಯಾವುದು?

iii) ಬಿ.ಎಂ. ಪುಟ್ಟಯ್ಯ ಯಾವ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ?

iv) ಅಕ್ಕಮ್ಮನ ವಚನಗಳ ಅಂಕಿತವೇನು?

v) ಕನಕದಾಸರ ಪೂರ್ವಾಶ್ರಮದ ಹೆಸರೇನು?

vi) ಡಾ. ರಾಜೇಂದ್ರ ಚೆನ್ನಿ ಅವರು ಯಾವ ಭಾಷೆಯ ಪ್ರಾಧ್ಯಾಪಕರಾಗಿದ್ದರು?

vii) ಮರೆಮ್ಮನ ಹಿರಿಯಮಗಳು ಏನಾದಳು?

viii) ಕೆ. ನೀಲಾ ಅವರು ಯಾವ ಜಿಲ್ಲೆಯವರು?

ix) ನೇಮಿ ಚಂದ್ರ ಅವರ ವೃತ್ತಿ ಯಾವುದು?

x) ಹೊಸೂರು ನರಸಿಂಹಯ್ಯ ಅವರು ಯಾವ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದರು?

---

30106(New)

B.A./B.Sc./B.Com. I Semester Degree Examination, February/March - 2023

ಕನ್ನಡೇತರ ವಿದ್ಯಾರ್ಥಿಗಳಿಗಾಗಿ (New)

# FUNCTIONAL KANNADA

## KAN –NK ಕನ್ನಡ ಕಲಿ

**Time : 3 Hours** **Maximum Marks : 60**

***Instructions to Candidates:***

1) ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

1. ವರ್ಣಮಾಲೆ ಎಂದರೇನು ? ಅವುಗಳ ಬಗೆಗಳನ್ನು ಕುರಿತು ಬರೆಯಿರಿ.

**(ಅಥವಾ)**

ವ್ಯಂಜನಗಳು ಎಂದರೇನು ? ವ್ಯಂಜನಾಕ್ಷರಗಳನ್ನು ಬರೆಯಿರಿ. **(10)**

2. ಸಜಾತಿ ಒತ್ತಕ್ಷರಗಳೆಂದರೇನು ? ಉದಾಹರಣೆಯೊಂದಿಗೆ ವಿವರಿಸಿರಿ.

**(ಅಥವಾ)**

ವಾಕ್ಯಗಳು ಎಂದರೇನು ? ಅವುಗಳ ಪ್ರಕಾರಗಳಾವುವು ಉದಾಹರಣೆಯೊಂದಿಗೆ ತಿಳಿಸಿರಿ. **(10)**

3. 'ಯ' ದಿಂದ 'ಳ' ದ ವರೆಗೆ ಬರುವ ಬಳ್ಳಿಗಳನ್ನು ಬರೆಯಿರಿ.

**(ಅಥವಾ)**

ವರ್ಗೀಯ ವ್ಯಂಜನಗಳ ಬಳ್ಳಿಗಳನ್ನು ಬರೆಯಿರಿ. **(10)**

4. ಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಕುರಿತು ಉದಾಹರಣೆಯೊಂದಿಗೆ ವಿವರಿಸಿರಿ.

**(ಅಥವಾ)**

'1' ರಿಂದ '20' ರ ವರೆಗೆ ಅಕ್ಷರಗಳಲ್ಲಿ ಬರೆಯಿರಿ. **(10)**

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

i) ಅಲ್ಪಪ್ರಾಣ

ii) ಸ್ವರಗಳು

iii) ಯೋಗವಾಹಗಳು

iv) ಅನುನಾಸಿಕ

[P.T.O.

6. **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಕನ್ನಡದ ವರ್ಣಮಾಲೆಗಳು ಎಷ್ಟು ?

ii) ಹೃಸ್ವಸ್ವರ ಎಂದರೇನು ?

iii) ಯೋಗವಾಹಗಳು ಯಾವುವು ?

iv) '25' ಈ ಅಂಕಿಯನ್ನು ಅಕ್ಷರದಲ್ಲಿ ಬರೆಯಿರಿ.

v) 'ಶಾಲೆಯನ್ನು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ ಯಾವುದು ?

vi) 'ಅಮರ' ಪದದಲ್ಲಿರುವ ಅವರ್ಗೀಯ ವ್ಯಂಜನ ಯಾವುದು ?

vii) 'ಅರವತ್ತೈದು' ಇದನ್ನು ಕನ್ನಡದ ಅಂಕಿಯಲ್ಲಿ ಬರೆಯಿರಿ.

viii) ಎರಡು ಸಜಾತಿ ಒತ್ತಾಕ್ಷರಗಳನ್ನು ಬರೆಯಿರಿ.

ix) ಷಷ್ಠಿ ವಿಭಕ್ತಿ ಪ್ರತ್ಯಯಕ್ಕೆ ಒಂದು ಉದಾಹರಣೆ ನೀಡಿ.

x) ಅನುನಾಸಿಕ ಅಕ್ಷರಗಳು ಯಾವುವು ?

22102

# B.A./B.S.W. I Semester Degree Examination, February/March 2022
## KANNADA (Basic)
### ಅರಿವು – 1 (New)

Time : 3 Hours | Max. Marks : 80

*ಸೂಚನೆಗಳು :* 1) ಭಾಷೆ ಹಾಗೂ ಬರಹದ **ಶುದ್ಧಿಗೆ ಗಮನ** ಕೊಡಲಾಗುವುದು.
2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ **ಪೂರ್ಣಗುಣಗಳು.**

1. ''ಮಹಿಳೆ ಮತ್ತು ಸಾಂಸ್ಕೃತಿಕ ಭ್ರೂಣ ಹತ್ಯೆ'' ಲೇಖನದಲ್ಲಿ ದೈಹಿಕ ಹತ್ಯೆಗಿಂತ ಸಾಂಸ್ಕೃತಿಕ ಹತ್ಯೆ ಅಪಾಯಕಾರಿ ಎಂಬುದನ್ನು ಹೇಗೆ ಚಿತ್ರಿಸಲಾಗಿದೆ ? ನಿರೂಪಿಸಿರಿ.

**ಅಥವಾ**

''ಇರದಡಿಯೆತ್ತಿ'' ಕಾವ್ಯ ಭಾಗದಲ್ಲಿ ಮಹಾಕವಿ ಪಂಪನು ತಿಳಿಸಿದ ಸಿಂಹಾಸನದ ಅಧಿಕತೆಯನ್ನು ವಿವರಿಸಿರಿ. **(1×10=10)**

2. ಬಾಲ್ಯ ವಿವಾಹದಿಂದಾಗುವ ಕೆಟ್ಟ ಪರಿಣಾಮಗಳನ್ನು 'ಪುಟ್ಟ ವಿಧವೆ' ಕವಿತೆ ಹೇಗೆ ಧ್ವನಿಸುತ್ತದೆ ? ವಿವರಿಸಿ.

**ಅಥವಾ**

ತಂಬೂರಿ ರಾಜಮ್ಮನವರ ಆತ್ಮಕಥೆ – ''ಹಾಡುವ ಹಕ್ಕಿಯ ಶೋಕ ಗೀತೆ'' ಯಲ್ಲಿ ಮೂಡಿಬಂದ ಅವರ ವ್ಯಕ್ತಿತ್ವವನ್ನು ನಿರೂಪಿಸಿರಿ. **(1×10=10)**

3. ಕೆಳಗಿನವುಗಳಲ್ಲಿ ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×5=10)**

   1) ಆಹ್ವಾನ.

   2) ನಿಮ್ಮ ಪುರುಷ ಸೂಕ್ತದಲ್ಲಿ.

   3) ಜೀವ ಮಿಡಿತದ ಸದ್ದು.

4. 'ಆರ್ಥಿಕ ಯುದ್ಧ ಅಪಾಯಕಾರಿ' ಎಂಬುದನ್ನು 'ಶಬ್ದವಿಲ್ಲದ ಯುದ್ಧ' ಲೇಖನ ಹೇಗೆ ಚಿತ್ರಿಸುತ್ತದೆ ? ವಿವರಿಸಿ.

**ಅಥವಾ**

'ಖಡ್ಗದ ಯುದ್ಧ ಬೇಡ' ಕಾವ್ಯ ಭಾಗದ ಭಾವಸ್ವಾರಸ್ಯ ನಿರೂಪಿಸಿರಿ. **10**

5. 'ಮಗು ಮಲಗಿದೆ ಎದೆಯ ಮೇಲೆ' ಕವಿತೆಯಲ್ಲಿ ಚಿತ್ರಣಗೊಂಡ ದ್ವೇಷ-ಅಸೂಯೆಗಳ ಚಿತ್ರಣವನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

**ಅಥವಾ**

ನಿರಂಜನರ 'ಎಣ್ಣೆ! ಚಿಮಣಿ ಎಣ್ಣೆ!' ಕಥೆಯು ವ್ಯಾಪಾರಿಗಳ ಕಾಳದಂಧೆಯನ್ನು ಹೇಗೆ ತಿಳಿಸುತ್ತದೆ ? ವಿವರಿಸಿರಿ. **10**

P.T.O.

6. ಕೆಳಗಿನವುಗಳಲ್ಲಿ ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×5=10)**

1) ಸುಕನ್ಯಾ ಮಾರುತಿ.

2) ವೀರನ ಕನಿಕರ.

3) ಗಜಲ್.

7. **ಎರಡಕ್ಕೆ** ಸಂದರ್ಭದೊಡನೆ ಸ್ಪಷ್ಟೀಕರಣ ಬರೆಯಿರಿ : **(2×5=10)**

1) ಕಡಲಾಗಿ ಸೊಕ್ಕಿ ಮೆರೆವೆ ಒಡಲುದ್ದ ಮಿಕ್ಕಿವೊರೆವೆ.

2) ಪಿಡಿಯೆಂ ಪುರಿಗಣೆಯಂ ನರ.

3) ನಿನ್ನ ಪತಿಯ ಕುರುಹ ಹೇಳಾ ಎಲೆ ಅವ್ವಾ .

4) ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ.

8. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(10×1=10)**

1) ಎಚ್. ಎಸ್. ಶ್ರೀಮತಿಯವರ ಜನ್ಮಸ್ಥಳ ಯಾವುದು ?

2) ಪಂಪನ ಕಾವ್ಯಗಳನ್ನು ತಿಳಿಸಿರಿ.

3) ಬೇಂದ್ರೆಯವರ ಯಾವ ಕೃತಿಗೆ 'ಜ್ಞಾನಪೀಠ' ಪ್ರಶಸ್ತಿ ದೊರೆತಿದೆ ?

4) ಕರ್ಣನು – ಕುಂತಿಗೆ ಏನೆಂದು ವಚನ ಕೊಟ್ಟನು ?

5) 'ಒಂದು ಮರದ ಕತೆ' ಕವಿತೆಯ ಕವಿ ಯಾರು ?

6) ತಂಬೂರಿ ರಾಜಮ್ಮ ಯಾರನ್ನು ವಿವಾಹವಾದಳು ?

7) ಯುದ್ಧದ ವ್ಯಾಪಾರವು ಯಾರಿಗೂ ಒಳ್ಳೆಯದಲ್ಲ ಎಂದು ಹೇಳಿದವರಾರು ?

8) ನಿರಂಜನರ ಮೂಲ ಹೆಸರೇನು ?

9) ಕೆ. ನೀಲಾ ಅವರು ಹುಟ್ಟಿದ ಊರು ಯಾವುದು ?

10) ಭರತ–ಬಾಹುಬಲಿಯ ತಂದೆಯ ಹೆಸರೇನು ?

---

25102

## B.Com./B.B.M./B.B.A. I Semester Degree Examination, February/March 2022
## KANNADA (Basic)
### ಪತ್ಯ : ಒಡಲು – ೧ (New)

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

*ಸೂಚನೆಗಳು : 1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.*
*2) ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.*

1. ಹದಿಹರೆಯದ ಹೆಣ್ಣುಮಕ್ಕಳಿಗೆ ದೊರಕಬೇಕಾದ ಕೌಟುಂಬಿಕ ಬೆಂಬಲವನ್ನು 'ಹುಡುಗಿಗೆ ಬೇಕಾದ್ದು ರಕ್ಷಣೆಯೋ, ಬದುಕುವ ಅವಕಾಶವೋ' ಲೇಖನವನ್ನಾಧರಿಸಿ ಬರೆಯಿರಿ. 10

**ಅಥವಾ**

ದ್ರೌಪದಿಯ ಪ್ರತಿಭಟನೆ 'ಸ್ತ್ರೀಮತವನುತ್ತರಿಸಲಾಗದೆ' ಕಾವ್ಯಭಾಗದಲ್ಲಿ ಹೇಗೆ ಪ್ರಕಟವಾಗಿದೆ ? ವಿವರಿಸಿರಿ.

2. '....ಗೆ', 'ಪ್ರಭುವೆ ನೀನೊಮ್ಮೆ ಹೆಣ್ಣಾಗು', 'ಸೀರೆಯೆಂದರೆ' – ಕವನಗಳಲ್ಲಿ ಎರಡರ ಭಾವಸ್ವಾರಸ್ಯ ಬರೆಯಿರಿ. 10

**ಅಥವಾ**

ಉಮಾಶ್ರೀ ಅವರು ಕೌಟುಂಬಿಕ ಬದುಕಿನಲ್ಲಿ ಎದುರಿಸಿದ ಕಷ್ಟಗಳನ್ನು 'ಬೆಂಕಿಬೆಡಗು' ಆತ್ಮಕಥೆಯನ್ನಾಧರಿಸಿ ಬರೆಯಿರಿ.

3. ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ : 15

1) ಕೆರೆಗೆ ಹಾರ.
2) ಆಯ್ದಕ್ಕಿ ಲಕ್ಕಮ್ಮ.
3) ಸರ್ಕಸ್ ಹುಡುಗಿ.
4) ಮೈಲುಗಲ್ಲುಗಳು.
5) ನೇಮಿಚಂದ್ರ.

4. ಕನ್ನಡ ಭಾಷೆಯ ಅಳಿವು-ಉಳಿವಿನ ಕುರಿತು ಚಂಪಾ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ. 10

**ಅಥವಾ**

ಕನ್ನಡವನ್ನು ಆಡಳಿತ ಭಾಷೆಯಾಗಿ ಅನ್ವಯಗೊಳಿಸುವ ಪ್ರಯತ್ನ ಕೆ. ವಿ. ನಾರಾಯಣ ಅವರ ಲೇಖನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

5. ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ಕುರಿತು ಸೋದಾಹರಣವಾಗಿ ಬರೆಯಿರಿ. 10

ಅಥವಾ

ಲೇಖನ ಚಿಹ್ನೆಗಳು ಯಾವುವು ? ವಿವರಿಸಿರಿ.

6. ಕೆಳಗಿನವುಗಳಲ್ಲಿ ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ : 15

1) ಚಂಪಾ

2) ವ್ಯವಹಾರದಲ್ಲಿ ಕನ್ನಡ

3) ಒಳವಿಳಾಸ

4) ಪತ್ರದ ಒಡಲು

5) ಅಪೂರ್ಣ ವಿರಾಮ.

7. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : 10

1) ಎಚ್. ಎಸ್. ಶ್ರೀಮತಿಯವರು ಎಲ್ಲಿ ಜನಿಸಿದರು ?

2) ಭಾಗೀರತಿಯ ಗಂಡನ ಹೆಸರೇನು ?

3) ಅಕ್ಕಮಹಾದೇವಿಯ ಅಂಕಿತನಾಮವೇನು ?

4) ನಾನು ಹೇಮಿ ಗಂಡ ಎಂದು ಹೇಳಿದವರು ಯಾರು ?

5) ಉಮಾಶ್ರೀ ಅವರ ಆತ್ಮಕಥೆಯ ಹೆಸರೇನು ?

6) ಚಂಪಾ ಎಂದು ಯಾರನ್ನು ಕರೆಯುತ್ತಾರೆ ?

7) ಆಡಳಿತ ಕನ್ನಡ ಲೇಖನ ಬರೆದವರು ಯಾರು ?

8) ವ್ಯವಹಾರದಲ್ಲಿ ಕನ್ನಡ ಲೇಖನ ಬರೆದವರು ಯಾರು ?

9) ಪೂರ್ಣವಿರಾಮ ಎಲ್ಲಿ ಬಳಸಬೇಕು ?

10) ಅಪೂರ್ಣ ವಿರಾಮ ಹೇಗಿರುತ್ತದೆ ? ಉದಾಹರಿಸಿರಿ.

---

22122

# B.A. I Semester Degree Examination, February/March 2022
## KANNADA (Optional)
### ಸೊಲ್ಲು – ೧ (New)

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೮೦

**ಸೂಚನೆಗಳು :** *೧) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಹರಿಸಲಾಗುವುದು.*
*೨) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.*

೧. 'ಡೊಂಬರ ಚೆನ್ನೆ', 'ದುಃಖಸೇತು' ಕವನಗಳಲ್ಲಿ ವ್ಯಕ್ತವಾದ ಸ್ತ್ರೀಬದುಕಿನ ನೋವುಗಳನ್ನು ಸಾದರಪಡಿಸಿರಿ. **(10×1=10)**

**ಅಥವಾ**

'ಮಲ್ಲಮ್ಮ' ಕಥೆಯಲ್ಲಿ ವ್ಯಕ್ತವಾದ ಸಮಾಜದ ಕ್ರೂರ ದೃಷ್ಟಿಯನ್ನು ಕುರಿತು ಚರ್ಚಿಸಿರಿ.

೨. 'ಮನುವಿನ ರಾಣಿ' ಕಥೆಯಲ್ಲಿ ಮೂಡಿಬಂದ ಸ್ತ್ರೀ ಬದುಕಿನ ಅಸಹಾಯಕತೆಯನ್ನು ಚಿತ್ರಿಸಿರಿ. **(10×1=10)**

**ಅಥವಾ**

'ಚೋಮನ ದುಡಿ' ಕಾದಂಬರಿಯು ದಲಿತ ಬದುಕಿನ ಬವಣೆಯನ್ನು ಸಮರ್ಥವಾಗಿ ಹಿಡಿದಿಟ್ಟಿದೆ. ಈ ಮಾತನ್ನು ಸಾದರಪಡಿಸಿರಿ.

೩. ಎರಡಕ್ಕೆ ಟಿಪ್ಪಣಿ ಬರೆಯಿರಿ : **(5×2=10)**

ಅ) ರಂಗವಲ್ಲಿ

ಆ) ಕಲ್ಲು ಕುಟಿಗರು

ಇ) ಬೆಳ್ಳಿ.

೪. ವಸಾಹತುಶಾಹಿ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಶಿವರಾಮ ಪಡಿಕಲ್ ಅವರ ಲೇಖನವನ್ನು ಆಧರಿಸಿ ವಿವರಿಸಿರಿ. **(10×1=10)**

**ಅಥವಾ**

ಪ್ರಗತಿಶೀಲ ಸಾಹಿತ್ಯದಲ್ಲಿ ನಡೆದ ಪ್ರಯೋಗಶೀಲತೆಯನ್ನು ಚರ್ಚಿಸಿರಿ.

೫. ನವೋದಯ ಸಾಹಿತ್ಯದ ಬೆಳವಣಿಗೆಯನ್ನು ವಿವರಿಸಿರಿ. **(10×1=10)**

**ಅಥವಾ**

ಹೊಸಗನ್ನಡದ ಆರಂಭ ಕಾಲಘಟ್ಟದಲ್ಲಿ ಬೆಳೆದ ಮಹಿಳಾ ಸಾಹಿತ್ಯವನ್ನು ಸಾದರಪಡಿಸಿರಿ.

P.T.O.

೬. ಎರಡಕ್ಕೆ ಟಿಪ್ಪಣಿ ಬರೆಯಿರಿ : (5×2=10)

ಅ) ಬಿ.ಎಂ. ಶ್ರೀಯರ ''ಇಂಗ್ಲೀಷ್ ಗೀತೆಗಳು''.

ಆ) ಪ್ರಗತಿಶೀಲ ಸಾಹಿತ್ಯ ಘಟ್ಟದಲ್ಲಿ ನಾಟಕ–ರಂಗಭೂಮಿ.

ಇ) ಮಹಿಳಾ ಕಥಾ ಸಾಹಿತ್ಯ .

೭. ಎರಡಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಣ ನೀಡಿರಿ. (5×2=10)

1) ಬಾಳಿದು ಕನಸಲ್ಲ, ಗೋಳಿನ ತಿನಿಸಲ್ಲ.

2) ಅನಲೆ ನಿನ್ನ ಮಗಳಲ್ತೆನ್ನವಳ್ ಇವಳೆನ್ನ ಕಾಪಿಡುವ ದೇವಿ

3) ಹೆಣ್ಣುಗಂಡೆಂಬೆರಡು ಗೊಂಬೆಗಳ ಆಟದೊಳು ಎನ್ನೊಡಲ ಕುದಿಯುತಿದೆ.

4) ಬೂದೆಣ್ಣ ಇರೋವರ್ಗೆ ನಿನಗೇನ್ ಕಡಿಮ್ಯಾಗ್ಯಾದಂಗೆ ? ಆತನ ಮನ್ಯಾಗಿರಲ್ಲ ಹೋಗಿ.

೮. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

1) ಬರಕೋ ಪದ ಬರಕೋ – ಈ ತತ್ವಪದದ ರಚನಾಕಾರರು ಯಾರು ?

2) 'ನಾಗಿಯ ಕಥೆ' ಕವನದ ಕರ್ತೃ ಯಾರು ?

3) 'ಶ್ರೀನಿವಾಸ' ಇದು ಯಾರ ಕಾವ್ಯನಾಮ ?

4) ಕೊಡಗಿನ ಗೌರಮ್ಮಳ ಜನ್ಮಸ್ಥಳ ಯಾವುದು ?

5) ದೇವಾಂಗನ ಶಾಸ್ತ್ರೀಯವರ ಯಾವ ಕಥೆ ಪಠ್ಯವಾಗಿದೆ ?

6) ಚೋಮನ ಮಕ್ಕಳನ್ನು ಹೆಸರಿಸಿರಿ.

7) ಚೋಮನಿಗೆ ಇಷ್ಟವಾದ ಎರಡು ವಸ್ತುಗಳು ಯಾವುವು ?

8) 'ಮಾಡಿದುಣ್ಣೋಮಾರಾಯ' – ಕಾದಂಬರಿ ಲೇಖಕರು ಯಾರು ?

9) ವೆಂಕಟಾಚಾರ್ಯರು ಯಾವ ಭಾಷೆಯ ಕೃತಿಗಳನ್ನು ಅನುವಾದಿಸಿದರು ?

10) ಮುದ್ದಣ್ಣ ರಾಮನನ್ನೆ ಕುರಿತು ಬರೆದ ಕೃತಿಗಳು ಯಾವುವು ?

---

22122(New)

**B.A. I Semester Degree Examination, March/April - 2021**

**KANNADA (Optional)**

**ಸೊಲ್ಲು – 1**

**(ಹೊಸ ಪಠ್ಯಕ್ರಮ)**

**ಕಾಲಾವಧಿ : 3 ಗಂಟೆಗಳು** **ಒಟ್ಟು ಅಂಕಗಳು : 80**

**ಸೂಚನೆಗಳು:**

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

**1.** 'ದುಃಖಸೇತು' ಮತ್ತು 'ಹೆಣ್ಣಾಟ' – ಕವನಗಳಲ್ಲಿ ವ್ಯಕ್ತವಾದ ಭಾವಸೌಂದರ್ಯ ವಿವರಿಸಿರಿ. **(1×10=10)**

**(ಅಥವಾ)**

ರಾಜಮ್ಮಳ ಅಂತರಂಗದ ನೋವು 'ಮನುವಿನ ರಾಣಿ' ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ? ಚಿತ್ರಿಸಿರಿ.

**2.** ಕುಟುಂಬ ಹಾಗೂ ಸಾಮಾಜಿಕ ಶೋಷಣೆಗೆ ಬಲಿಯಾದ ಮಹಿಳೆಯರ ತಲ್ಲಣಗಳನ್ನು 'ಅಡಕತ್ತರಿ' ಹಾಗೂ 'ಅವಳ ಉದ್ಧಾರ' ಕಥೆಗಳನ್ನಾಧರಿಸಿ ಬರೆಯಿರಿ. **(1×10=10)**

**(ಅಥವಾ)**

ಚೋಮ ಅನುಭವಿಸಿದ ಸಂಕಷ್ಟಗಳನ್ನು 'ಚೋಮನ ದುಡಿ' ಕಾದಂಬರಿಯನ್ನಾಧರಿಸಿ ಬರೆಯಿರಿ.

**3.** ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

a) ಕಲ್ಲು ಕುಟಿಗರು.

b) ನಾಗಿಯ ಕಥೆ.

c) ಮಲ್ಲಮ್ಮ.

**4.** ಹೊಸಗನ್ನಡ ಸಾಹಿತ್ಯದ ಮೊದಲ ಷಟ್ಪದಿ ಬೆಳವಣಿಗೆಯನ್ನು ಸಂಗ್ರಹಿಸಿ ಬರೆಯಿರಿ. **(1×10=10)**

**(ಅಥವಾ)**

ಹೊಸಗನ್ನಡ ಸಾಹಿತ್ಯಕ್ಕೆ ಮಹಿಳಾ ಲೇಖಕಿಯರ ಕೊಡುಗೆ ಏನು? ವಿವರಿಸಿರಿ.

**[P.T.O.**

5. ವಸಾಹತುಶಾಹಿ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆ ಕುರಿತು ವಿವರಿಸಿರಿ. (1×10=10)

**(ಅಥವಾ)**

ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ರಚನೆಯಾದ ಕಾದಂಬರಿಗಳ ಕುರಿತು ಸೋದಾಹರಣವಾಗಿ ಬರೆಯಿರಿ.

6. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

a) ಬಾಸೆಲ್ ಮಿಷನ್ ಸಂಸ್ಥೆ.

b) ಪ್ರಗತಿಶೀಲ ಚಳುವಳಿ.

c) ನಾಟಕ – ರಂಗಭೂಮಿ.

7. **ಎರಡಕ್ಕೆ** ಸಂದರ್ಭದೊಡನೆ ಸ್ಪಷ್ಟೀಕರಣ ನೀಡಿರಿ. (2×5=10)

a) ಏಕೆ! ಡೊಂಬನೆ! ನಿಲ್ಲಿಸಾಟವ! ಈಕೆಯಲಿ ಮನಸೋತುದು.

b) ಅನಲೆ ನಿನ್ನ ಮಗಳಲ್ತೆನ್ನವಳ್.

c) ನಮ್ಮ ಗುಡಿಸಲು ಮಾತ್ರ ಸೋಲುವುದು ಬಿಡದು.

d) ನಿಜವಾಗಿಯೂ ಈತ ಮಹಾಪುರುಷ.

8. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ಬರಕೋ ಪದ ಬರಕೋ ತತ್ವಪದ ಬರೆದವರು ಯಾರು?

b) ಬಿ.ಎಂ.ಶ್ರೀ ಅವರ ಮೊದಲ ಅನುವಾದ ಸಂಕಲನ ಯಾವುದು?

c) ಹೆಣ್ಣಾಟ ಕವನದ ಕರ್ತೃ ಯಾರು?

d) ಕುವೆಂಪು ಅವರ ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿ ಯಾವುದು?

e) ಜೋಮ ನುಡಿಸುತ್ತಿದ್ದ ವಾದ್ಯ ಯಾವುದು?

f) ಬಾಸೆಲ್ ಮಿಷನ್ ಪ್ರಾರಂಭಿಸಿದವರು ಯಾರು?

g) 'ಇಂಗ್ಲಿಷ ಗೀತೆಗಳು' ಪ್ರಕಟವಾದ ವರ್ಷ ಯಾವುದು?

h) 'ಟೊಳ್ಳುಗಟ್ಟಿ' ನಾಟಕ ಬರೆದವರು ಯಾರು?

i) ಮಹಿಳಾ ಸಾಹಿತ್ಯ ಆರಂಭ ಕಾಲದ ಇಬ್ಬರು ಲೇಖಕಿಯರನ್ನ ಹೆಸರಿಸಿ.

j) ಪ್ರಗತಿಶೀಲ ಸಾಹಿತ್ಯ ಲೇಖನದ ಲೇಖಕರಾರು?

---

27102(New)

**B.Sc./B.H.Sc./B.F.T./B.C.A. I Semester Degree Examination, March/April - 2021**

**ಕನ್ನಡ ಅವಶ್ಯಕ**

**ಕುರುಹು–1**

**(ಹೊಸ ಪಠ್ಯಕ್ರಮ)**

**ಅವಧಿ : 3 ಗಂಟೆಗಳು** **ಒಟ್ಟು ಅಂಕಗಳು : 80**

**ಸೂಚನೆಗಳು:**

1) ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

**1.** ಶೀಲ ಸಂಹಿತೆ ನೈತಿಕಧರ್ಮವಾಗಬೇಕೆ ಹೊರತು ಹೆಣ್ಣನ್ನು ಬಂಧಿಸುವ ಬೇಲಿಯಾಗಬಾರದು. "ಮಗಳಿಗೆ ಶೀಲಸಂಹಿತೆ" ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿರಿ. **(1×10=10)**

**(ಅಥವಾ)**

ಸೀತೆಯನ್ನು ಭಾರತೀಯ ಸಮುದಾಯದ ಮೊದಲ ಮತ್ತು ಅಂತಿಮ ಸ್ತ್ರೀ ಮಾದರಿಯೆಂದೇ ಬಿಂಬಿಸಲಾಗಿದೆ "ಕರುಣಾಳು ರಾಘವನಲ್ಲಿ ತಪ್ಪಿಲ್ಲ" ಪಠ್ಯದ ಹಿನ್ನಲೆಯಲ್ಲಿ ವಿವರಿಸಿರಿ.

**2.** ದ.ರಾ. ಬೇಂದ್ರೆಯವರ "ಮೊದಲಗಿತ್ತಿ" ಕವನವು ಸ್ತ್ರೀಪರ ನಿಲುವುಗಳ ಪ್ರತಿನಿಧಿಯಂತಿದೆ ಚರ್ಚಿಸಿರಿ. **(1×10=10)**

**(ಅಥವಾ)**

"ನಾಳೀನ ಚಿಂತ್ಯಾಕ" ಪಠ್ಯವು ಶಾಂತಾ ಹಬ್ಬೀಕರ ಅವರ ಆತ್ಮಚರಿತ್ರೆಯಾಗಿದೆ ವಿವರಿಸಿ.

**3.** ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

a) ಡಾ॥ ಜಿ. ಎಸ್ ಶಿವರುದ್ರಪ್ಪ.

b) "ಇರುಳ ಹಕ್ಕಿಯ ಹಾಡು" ಕವಿತೆಯ ಆಶಯ.

c) ಕುಣಿಯೇ ಘುಮ್ಮಾ

**4.** ಜೇನ್ ಗುಡಾಲ್‌ಳ ಜೀವನ ಮತ್ತು ಸಾಧನೆಗಳನ್ನು ಕುರಿತು ವಿವರಿಸಿರಿ. **(1×10=10)**

**(ಅಥವಾ)**

"ಕಾಲುಗಳೆರಡು ಗಾಲಿ ಕಂಡಯ್ಯ" ಗಾಂಧೀಜಿಯವರ ವಿಚಾರಗಳು ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

**5.** ನರರೂಪದ ಯಂತ್ರಗಳಿಂದಾಗಿ ಮನುಷ್ಯರು ಕುಗ್ಗುತ್ತಿರುವ ಬಗೆ "ಹೆಡ್‌ಹಂಟರ್" ಕಥೆಯಲ್ಲಿ ಹೇಗೆ ಒಡಮೂಡಿ ಬಂದಿದೆ ಚರ್ಚಿಸಿರಿ. **(1×10=10)**

**(ಅಥವಾ)**

ನಡೆಯುವ ಕಡ್ಡಿ! ಹಾರುವ ಎಲೆ! ಪ್ರಬಂಧದ ಆಶಯ ಕುರಿತು ವಿವರಿಸಿರಿ.

[P.T.O.

6. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

a) "ಎಂದೂ ಮರೆಯಬಾರದ ಎಂಡೋಸಲ್ಫಾನ್"

b) ಹುಲಿ ಸವಾರಿ

c) ಕೆ.ಪಿ. ಪೂರ್ಣಚಂದ್ರ ತೇಜಸ್ವಿ

7. ಬೇಕಾದ **ಎರಡಕ್ಕೆ** ಸಂದರ್ಭದೊಡನೆ ಸ್ಪಷ್ಟೀಕರಣ ನೀಡಿರಿ. (2×5=10)

a) ಅಗ್ನಿ ಪರೀಕ್ಷೆ ಸೀತೆಗೆ ಮಾತ್ರ; ಶ್ರೀರಾಮ ನಾದರೋ ಅಕಳಂಕ ಪ್ರಶ್ನಾತೀತ!

b) ಹದಿನಾರು ರಾಜರು ತಲೆಕೆಳಗಾದರು ಆದರೂ ತಲೆಯೆತ್ತಿ ನಿಂತಿರುವೆ.

c) ಇಂದಿಗೂ ಹೊಸ್ತಿಲ ಹೊರಗೆ ಲಕ್ಷ್ಮಣರೇಖೆ ದಾಟಿ ನಡೆದೇನೆಂಬ ಧೈರ್ಯವಿಲ್ಲ.

d) ಅರಸಿ ಗುಲ್ನಾರಳ ಮಗಳಂತೆ ಅಪರೂಪ ಸುಂದರಿಯಲ್ಲಿ ಹತ್ತಿರಲ್ಲೊಬ್ಬಳು ನನ್ನ ಮಗಳು.

8. **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) "ಹಿತ್ತಲಕ್ಷಿಣಿಯ ಹೆಜ್ಜೆಗಳು" ಕೃತಿಯ ಲೇಖಕರು ಯಾರು?

b) ಸತ್ಯಕ್ಕನ ವಚನಗಳ ಅಂಕಿತ ನಾಮವೇನು?

c) "ಗಂಗಾವತರಣ" ಕವಿತಾ ಸಂಕಲನದ ಕರ್ತೃ ಯಾರು?

d) "ವಿಮರ್ಶೆಯ ಪೂರ್ವಪಶ್ಚಿಮ" ಕೃತಿಯ ಲೇಖಕರು ಯಾರು?

e) "ಅನುದಿನದ ಅಂತರಗಂಗೆ" ಇದು ಯಾರ ಆತ್ಮಕಥನವಾಗಿದೆ?

f) "ಬಾಲಗೋಪಾಲ" ಕಾದಂಬರಿಯ ಲೇಖಕರು ಯಾರು?

g) ಜೇನ್‌ಗುಡಾಲ್‌ಳ ಜೀವನ ಚರಿತ್ರೆ ಬರೆದ ಕವಿ ಯಾರು?

h) "ಜುಗಾರಿಕ್ರಾಸ್" ಕೃತಿಯ ಕರ್ತೃ ಯಾರು?

i) "ಊರುಭಂಗ" ಕಾದಂಬರಿಯ ಲೇಖಕರು ಯಾರು?

j) "ಹಂಪಿ ಎಕ್ಸ್‌ಪ್ರೆಸ್" ಇದು ಯಾವ ಕವಿಯ ಕಥಾಸಂಕಲನವಾಗಿದೆ?

22102(New)

## B.A./B.S.W. I Semester Degree Examination, March/April - 2021

## KANNADA Basic

### ಅರಿವು – 1

### (ಹೊಸ ಪಠ್ಯಕ್ರಮ)

ಅವಧಿ : 3 ಗಂಟೆಗಳು ಒಟ್ಟು ಅಂಕಗಳು : 80

ಸೂಚನೆಗಳು:

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆಯ ಅಂಕಿಗಳು ಆ ಪ್ರಶ್ನೆಯ ಅಂಕಗಳಾಗಿವೆ.

1. ಸ್ತ್ರೀಯ ಸ್ಥಾನಮಾನಗಳಲ್ಲಿ ಕಂಡು ಬಂದ ಬದಲಾವಣೆಯ ಹಂತಗಳನ್ನು ವಸು ಮಳಲಿ ಹೇಗೆ ಗುರುತಿಸಿದ್ದಾರೆ? ಸ್ಪಷ್ಟಪಡಿಸಿರಿ. **(1×10=10)**

(ಅಥವಾ)

ಅನುಭವ ಮಂಟಪದಲ್ಲಿ ನಡೆದ ಪ್ರಭುದೇವ ಮತ್ತು ಅಕ್ಕಮಹಾದೇವಿ ಪ್ರಶ್ನೋತ್ತರಗಳ ಸ್ವಾರಸ್ಯವನ್ನು ವಿವರಿಸಿರಿ.

2. "ಜೀವ ಮಿಡಿತದ ಸದ್ದು" ಕವನದಲ್ಲಿ ಮಹಿಳೆಯ ತಲ್ಲಣಗಳು ಹೇಗೆ ವ್ಯಕ್ತವಾಗಿವೆ? ವಿವರಿಸಿರಿ. **(1×10=10)**

(ಅಥವಾ)

'ಹಾಡುವ ಹಕ್ಕಿಯ ಶೋಕಗೀತೆ'ಯಲ್ಲಿ ಚಿತ್ರಣವಾದ ತಂಬೂರಿ ರಾಜಮ್ಮ ಅವರ ಜೀವನಾನುಭವಗಳನ್ನು ಸಂಗ್ರಹಿಸಿ ಬರೆಯಿರಿ.

3. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**
   a) ಪುಟ್ಟ ವಿಧವೆ.
   b) ನಿಮ್ಮ ಪುರುಷ ಸೂಕ್ತದಲ್ಲಿ.
   c) ಹಾಡುವ ಹಕ್ಕಿಯ ಶೋಕಗೀತೆಯ "ಮೋಡಿಕಾರ ತಾತ".

4. ಯುದ್ಧ ಭೂಮಿಯಲ್ಲಿ ನಡೆದ ಭರತ – ಬಾಹುಬಲಿಯ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ. **(1×10=10)**

(ಅಥವಾ)

ಗಾಂಧಾರಿಯ ಅಂತರಂಗದ ತಳಮಳವನ್ನು ಕವಿ ರನ್ನ ಹೇಗೆ ಚಿತ್ರಿಸಿದ್ದಾನೆಂಬುದನ್ನು ಪಠ್ಯದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿರಿ.

[P.T.O.

5. ಯುದ್ಧವೆಂಬುದು ಸಕಲ ಪ್ರಾಣಿಗಳಿಗೆ ಕಂಟಕವಾಗಿದೆ. ಈ ಮಾತನ್ನು ವೀರನ ಕನಿಕರ ಕವನದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿರಿ. (1×10=10)

(ಅಥವಾ)

ಕೆ.ನೀಲಾ ಅವರ 'ಕೊಂದಹರುಳಿದರೆ' ಕಥೆಯಲ್ಲಿಯ ಪ್ರಯಾಣದ ಅನುಭವಗಳನ್ನು ವಿವರಿಸಿರಿ.

6. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)
   a) ಯುದ್ಧ ಬೀಜಗಳು.
   b) ಗಜಲ್ – ಮುಕ್ತಾಯಕ್ಕ.
   c) ವೀರನ ಕನಿಕರ.

7. ಬೇಕಾದ **ಎರಡಕ್ಕೆ** ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. (2×5=10)
   a) ಹೂ ಮಾಲೆ ಮುಳ್ಳು ಕಂಟಿಗಳ ಮೇಲೆ ತಾನೆಳೆದಳೊ!
   b) ಮೂರು ಗಂಟೆಗಳ ದುರಂತ ಚಿತ್ರಕಥೆ ಮುಕ್ತಾಯಗೊಳ್ಳುತ್ತದೆ.
   c) ಸಮರವ್ಯಾಪಾರಂ ಮಾಣ್ದು ಮಗನೆ.
   d) ಅವಕಂಡ ಸತ್ಯದ ಹಾದಿ ತೆರೆದೇ ಇದೆ.

8. **ವಸ್ತುನಿಷ್ಠ ಪ್ರಶ್ನೆಗಳು.** (10×1=10)
   a) ಡಾ. ವಸು ಮಳಲಿಯವರ ತಾಯಿಯ ಹೆಸರೇನು?
   b) ಇದರಡಿಯೆತ್ತಿಂ ಪಠ್ಯವನ್ನು ಎಷ್ಟನೆಯ ಆಶ್ವಾಸದಿಂದ ಆಯ್ದುಕೊಳ್ಳಲಾಗಿದೆ.
   c) 'ಭಾವಿಸಲು ರೂಪಗೆಂದು ನೋಡಾ' ಈ ಮಾತನ್ನು ಹೇಳಿದವರು ಯಾರು?
   d) ದ.ರಾ.ಬೇಂದ್ರೆ ವಿಸ್ತರಿಸಿ ಬರೆಯಿರಿ.
   e) ಹಾಡುವ ಹಕ್ಕಿಯ ಶೋಕಗೀತೆ ಪಠ್ಯದ ಲಿಪಿಕಾರ ಯಾರು?
   f) 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದವರು ಯಾರು?
   g) 'ಸುಂಟರಗಾಳಿ' ಇದು ಯಾರ ಕಥಾ ಸಂಕಲನ.
   h) ರತ್ನಾಕರವರ್ಣಿಯ ಕಾಲ ಯಾವುದು.
   i) ನಿರಂಜನರ ಹುಟ್ಟೂರು ಯಾವುದು?
   j) 'ಆವಾರಗರ್ದಿ' ಶಬ್ದದ ಅರ್ಥ.

---

25102(New)

# B.Com./B.B.A/B.B.M. I Semester Degree Examination, March/April - 2021

## KANNADA (Basic)

## ಒಡಲು – I

## Paper - I

## (ಹೊಸ ಪಠ್ಯಕ್ರಮ)

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 80

ಸೂಚನೆಗಳು:

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

1. ಹದಿಹರೆಯದ ಹೆಣ್ಣು ಮಕ್ಕಳಿಗೆ ಸಿಗಬೇಕಾದ ಕೌಟುಂಬಿಕ ಬೆಂಬಲವನ್ನು 'ಹುಡುಗಿಗೆ ಬೇಕಾದ್ದು ರಕ್ಷಣೆಯೇ ಬದುಕುವ ಅವಕಾಶವೋ' ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ. (1×10=10)

(ಅಥವಾ)

ಜನಪದರ ಜೀವನದಲ್ಲಿ ರೂಢಿಗತವಾಗಿದ್ದ ಸ್ತ್ರೀಶೋಷಣೆಯು 'ಕೆರೆಗೆ ಹಾರ' ಕಥನ ಕವನದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

2. ಅಮ್ಮನ ಸೀರೆಯು ಪ್ರತಿನಿಧಿಸುವ ಮಹಿಳಾವಾದವನ್ನು 'ಸೀರೆಯೆಂದರೆ' ಕವನದ ಹಿನ್ನೆಲೆಯಲ್ಲಿ ವಿವರಿಸಿರಿ. (1×10=10)

(ಅಥವಾ)

ಉಮಾಶ್ರೀಯವರ ವೈವಾಹಿಕ ಜೀವನದ ಸಮಸ್ಯೆಗಳನ್ನು ವಿವರಿಸಿರಿ.

3. ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ. (3×5=15)

a) ಕುಮಾರವ್ಯಾಸ.
b) ಅಕ್ಕಮಹಾದೇವಿ.
c) ಸ್ವರ್ಗದ್ವಾರದಿ ಯಕ್ಷಪ್ರಶ್ನೆ
d) ಪ್ರಭುವೇ ನೀನೊಮ್ಮೆ ಹೆಣ್ಣಾಗು.
e) ಮೈಲುಗಲ್ಲುಗಳು.

4. ಭಾಷೆಯ ಅಳಿವಿಗೆ ಕಾರಣವಾಗುವ ಅಂಶಗಳನ್ನು ವಿವರಿಸಿ. (1×10=10)

(ಅಥವಾ)

ವ್ಯವಹಾರ ಪತ್ರದ ಅಂಗಗಳಾವುವು? ವಿವರಿಸಿ.

[P.T.O.

5. ಕನ್ನಡವನ್ನು ಆಡಳಿತ ಭಾಷೆಯಾಗಿ ಅನ್ವಯಗೊಳಿಸಲು ರೂಪಿತವಾದ ಕಾನೂನಾತ್ಮಕ ಪ್ರಯತ್ನಗಳನ್ನು ವಿವರಿಸಿ. (1×10=10)

**(ಅಥವಾ)**

ಲೇಖನ ಚಿನ್ಹೆಗಳಾವುವು? ವಿವರಿಸಿ.

6. ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ. (3×5=15)

a) ಕೆ.ವಿ. ನಾರಾಯಣ.

b) ವ್ಯವಹಾರ ಪತ್ರ.

c) ಪತ್ರದ ಒಡಲು.

d) ಪೂರ್ಣ ವಿರಾಮ.

e) ವಿವರಣ ವಿರಾಮ.

7. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ಕಲ್ಲನ ಕೇರಿಯ ಗೌಡನ ಹೆಸರೇನು?

b) "ಕರ್ಣಾಟ ಭಾರತ ಕಥಾ ಮಂಜರಿ" ಕಾವ್ಯವನ್ನು ರಚಿಸಿರುವ ಕವಿ ಯಾರು?

c) ಆಯ್ದಕ್ಕಿ ಲಕ್ಕಮ್ಮನ ವಚನಗಳ ಅಂಕಿತವೇನು?

d) ಜಿ.ಎಸ್. ಶಿವರುದ್ರಪ್ಪನವರು ಯಾವ ಊರಿನವರು?

e) "ಸರ್ಕಸ್ ಹುಡುಗಿ" ಕವನದ ಕವಯಿತ್ರಿ ಯಾರು?

f) ಡಾ.ಕೆ.ವಿ. ನಾರಾಯಣ ಅವರ ಪಿ.ಎಚ್.ಡಿ ಮಹಾಪ್ರಬಂಧ ಯಾವುದು?

g) ಚಂಪಾ ಅವರ ಪೂರ್ಣ ಹೆಸರೇನು?

h) ಸುನೀಲ ಗಂಗೋಪಾಧ್ಯಾಯ ಯಾವ ಭಾಷೆಯ ಕವಿ?

i) "ಲೇಖನ ಚಿನ್ಹೆಗಳು – ಕನ್ನಡ ಶೈಲಿ ಕೈಪಿಡಿ" ಲೇಖನವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?

j) ಅರ್ಥಪೂರ್ಣ ವಾಕ್ಯದ ಕೊನೆಯನ್ನು ಸೂಚಿಸಲು ಯಾವ ಚಿನ್ಹೆಯನ್ನು ಬಳಸಲಾಗುತ್ತದೆ.

12102(Old)

B.Com./B.B.A./B.B.M. I Semester Degree Examination, March/April - 2021

# ಅವಶ್ಯಕ ಕನ್ನಡ (BASIC)

## 1) ಆಧುನಿಕ ಕಾವ್ಯ ಸಂಚಯ

## 2) ಅಪರೂಪದ ಅತಿಥಿ

### ಪತ್ರಿಕೆ : I

### (ಹಳೆ ಪಠ್ಯಕ್ರಮ)

ಅವಧಿ : 3 ಗಂಟೆಗಳು ಒಟ್ಟು ಅಂಕಗಳು : 80

ಸೂಚನೆಗಳು:

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಆಯಾ ಪ್ರಶ್ನೆಗಳ ಪೂರ್ಣ ಗುಣಗಳು.

1. ಕುವೆಂಪು ಅವರ ಕವನಗಳಲ್ಲಿ ಅಭಿವ್ಯಕ್ತಗೊಂಡಿರುವ ಪ್ರಕೃತಿಯ ರಮ್ಯತೆಯನ್ನು ವರ್ಣಿಸಿರಿ. (1×10=10)

(ಅಥವಾ)

ಸಾಮಾಜಿಕ ನ್ಯಾಯ, ಮಮ್ತಾಜಳ ಮಹಲು, ಅಡವಿಟ್ಟ ಸ್ವಾತಂತ್ರ್ಯ– ಇವುಗಳಲ್ಲಿ ಎರಡು ಕವನಗಳ ಭಾವಸ್ವಾರಸ್ಯವನ್ನು ಬರೆಯಿರಿ.

2. ಬಿ.ಟಿ.ಲಲಿತಾ ನಾಯಕ್ ಅವರ ಕವನಗಳಲ್ಲಿ ವ್ಯಕ್ತವಾದ ಸ್ತ್ರೀವಾದದ ಸ್ವರೂಪವನ್ನು ವಿಶ್ಲೇಷಿಸಿರಿ. (1×10=10)

(ಅಥವಾ)

ಭಯೋತ್ಪಾದಕ, ಬೆಕ್ಕು ಅಡ್ಡ ಹೋಯಿತು, ಸಮಯವಿದೆಯೇ ಪಪ್ಪಾ – ಇವುಗಳಲ್ಲಿ ಎರಡು ಕವಿತೆಗಳ ವಸ್ತುವಿಚಾರಗಳನ್ನು ವಿಮರ್ಶಿಸಿರಿ.

3. ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ. (3×5=15)

i. ಯಾತಕವ್ವ ಹುಬ್ಬಳ್ಳಿ–ಧಾರ್ವಾಡ!

ii. ಬಳೆಗಾರನ ಹಾಡು

iii. ಕುರಿಗಳು ಸಾರ್ ಕುರಿಗಳು.

[P.T.O.

iv. ಶೂದ್ರನಿಗೊಂದು ಪತ್ರ

v. ಸಾವಿರಾರು ನದಿಗಳು.

vi. ಚೆಲುವಿಗಷ್ಟು ಇರಲಿ ಒಲವು.

4. ಮಗಳ ಭದ್ರ ಭವಿಷ್ಯಕ್ಕಾಗಿ ತಂದೆ ಪಡುವ ಶ್ರಮವನ್ನು ರತ್ನವಿಲಾಸ ಕಥೆಯ ಹಿನ್ನೆಲೆಯಲ್ಲಿ ವಿವರಿಸಿರಿ. **(1×10=10)**

**(ಅಥವಾ)**

'ನಂಬಿಕೆಯೇ ದೇವರು' ಎಂಬುದು 'ಹೆಂಡತಿಯ ಹರಕೆ' ಕಥೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

5. ಕಲ್ಯಾಣಿಯ ಜೀವನ ಪ್ರೀತಿಯು 'ಅವಳ ಪ್ರೇಮ' ಕಥೆಯಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿಶ್ಲೇಷಿಸಿರಿ. **(1×10=10)**

**(ಅಥವಾ)**

'ಅಪರೂಪದ ಅತಿಥಿ' ಕಥೆಯ ಸ್ವಾರಸ್ಯವನ್ನು ವಿವರಿಸಿ.

6 ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ. **(3×5=15)**

i. ಸೀತಮ್ಮ

ii. ಶ್ರೀನಾಥ

iii. ರತ್ನಾ

iv. ರಂಗಮ್ಮ

v. ರಾಜ

vi. ಕೇಶವ

7. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

i. ನನ್ನ ಜನಗಳು ಕವಿತೆಯ ಕವಿ ಯಾರು?

ii. 'ಆಧುನಿಕ ಕಾವ್ಯ ಸಂಚಯ' ಪಠ್ಯಪುಸ್ತಕದ ಸಂಪಾದಕರು ಯಾರು?

iii. ಸವಿತಾ ನಾಗಭೂಷಣ ಅವರು ಯಾವ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ?

iv. ಸತ್ಯಾನಂದ ಪಾತ್ರೋಟರ ಪಿ.ಎಚ್.ಡಿ. ಮಹಾಪ್ರಬಂಧದ ಶೀರ್ಷಿಕೆಯೇನು?

v. ಕುವೆಂಪು ಅವರು ರಚಿಸಿರುವ ಮಹಾಕಾವ್ಯವನ್ನು ಹೆಸರಿಸಿ.

vi. ಮನೋರಮೆಯ ಗಂಡನ ಹೆಸರೇನು?

vii. ನಾಗಪ್ಪನ ಮಗಳ ಹೆಸರೇನು?

viii. ವಸುಳನ್ನು ಯಾವ ಹೂವಿಗೆ ಹೋಲಿಸಲಾಗಿದೆ?

ix. ನರಹರಿಯ ಹೆಂಡತಿಯ ಹೆಸರೇನು?

x. ಜಾತ್ರೆಯಲ್ಲಿ ಕೇಶವ ಯಾರೊಡನೆ ಹರಟುತ್ತ ನಿಂತಿದ್ದನು?

5. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. (2×5=10)

i) ರಾಷ್ಟ್ರ ವಂದನ

ii) ಜನಪದ ಗೀತೆಗಳು

iii) ಡಾ. ಸಿ.ಆರ್. ಚಂದ್ರಶೇಖರ

iv) ಡಾ. ಪಿ.ಎಸ್. ಶಂಕರ

6. ಕೆಳಗಿನ ಪ್ರಶ್ನೆಗಳಿಗೆ **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಬಾದಾಮಿ ಶಾಸನ ಯಾವ ಭಾಷೆಯಲ್ಲಿದೆ?

ii) ಕಿಸುವೊಳಲು ಎಂದರೆ ಯಾವ ಊರು?

iii) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೊದಲ ಮಹಿಳಾ ಅಧ್ಯಕ್ಷಿಣಿ ಯಾರು?

iv) ಕನ್ನಡದ ಮೊದಲ ಕವಿಯತ್ರಿ ಯಾರು?

v) 'ಜಾನಪದ' ಎನ್ನುವುದಕ್ಕೆ ಇಂಗ್ಲೀಷಿನಲ್ಲಿ ಏನೆಂದು ಕರೆಯುವರು?

vi) 'ರಹಸ್ಯ ವಿಶ್ವ' ಕಥೆ ಬರೆದವರಾರು?

vii) ಬಸವಣ್ಣನ ತಂದೆ, ತಾಯಿ ಹೆಸರೇನು?

viii) ಕರ್ನಾಟಕ ಸಂಗೀತಕ್ಕೆ ಭದ್ರ ಬುನಾದಿ ಹಾಕಿದ ದಾಸರ ಹೆಸರೇನು?

ix) ಎ.ಆರ್. ಮಣಿಕಾಂತ್ ಅವರ ತಂದೆ, ತಾಯಿ ಹೆಸರೇನು?

x) ಮಗಳ ಶೀಲ ಸಂಹಿತೆ ಲೇಖನ ಬರೆದವರಾರು?

31101 (New)

(NEP)

B.Sc./B.C.A./F.A.T./B.F.T. I Semester Degree Examination,

February/March - 2023

KANNADA (Basic) (New)

ಕನ್ನಡ ಕಿರಣ - 1

**Time : 3 Hours** **Maximum Marks : 60**

***Instructions to Candidates:***

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಗಡೆ ಬರೆದ ಅಂಕಗಳು ಆಯಾ ಪ್ರಶ್ನೆಯ ಪೂರ್ಣ ಗುಣಗಳು.

**1.** ಬಾದಾಮಿ ಶಾಸನ ಹಾಗೂ ನಾಡು, ನಾಡವರ್ಗಳ್ ಪದ್ಯದ ವಿಶೇಷತೆ ವಿವರಿಸಿರಿ.

(ಅಥವಾ)

ಹೊತ್ತಿತೋ ಹೊತ್ತಿತು ಹಾಗೂ ಪ್ರಾರ್ಥನೆ ಕವಿತೆಗಳ ಆಶಯ ವಿವರಿಸಿರಿ. **(10)**

**2.** 'ಭೂಮಿ' ಕುರಿತು ಶರಣರ ವಚನಗಳಲ್ಲಿ ಮೂಡಿ ಬಂದ ಚಿಂತನೆ ವಿವರಿಸಿರಿ.

(ಅಥವಾ)

'ರಹಸ್ಯವಿಶ್ವ' ಸಣ್ಣ ಕಥೆಯ ಆಶಯ ವಿವರಿಸಿರಿ. **(10)**

**3.** ಮಡಿ ಮಾಡುವ ಬಗೆ ಹಾಗೂ ಸ್ನಾನವ ಮಾಡಿರೊ ಕೀರ್ತನೆಗಳ ಆಶಯ ವಿವರಿಸಿರಿ.

(ಅಥವಾ)

ಬೆಳಕಿನ ಮಾಲಿನ್ಯದ ಕಾರಣ ಹಾಗೂ ಪರಿಣಾಮ ವಿವರಿಸಿರಿ. **(10)**

**4.** ಜಾಕ್ವೆಲಿನ್‌ಳು ಸಾವನ್ನು ಗೆದ್ದ ಬಗೆ 'ಆಕೆ ಸಾವನ್ನೇ ಗೆದ್ದಳು' ಲೇಖನ ಆಧರಿಸಿ ವಿವರಿಸಿರಿ.

(ಅಥವಾ)

ಬಸವತತ್ವದಲ್ಲಿ ಮೂಡಿ ಬಂದ ಚೈತನ್ಯದ ಸ್ವರೂಪದ ಕುರಿತು ರಂಜಾನ ದರ್ಗಾ ಅವರ ಲೇಖನ ಆಧರಿಸಿ ಬರೆಯಿರಿ. **(10)**

[P.T.O.

0071103

25102(New)

# B.Com./BBA./BBM. I Semester Degree Examination Oct/Nov -2019

## KANNADA BASIC

**ಒಡಲು–1**

**ಹೊಸ ಪಠ್ಯಕ್ರಮ**

**(New)**

**Time : 3 Hours** **Maximum Marks : 80**

***Instructions to Candidates:***

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.

2) ಬಲಗಡೆ ಬರೆದ ಅಂಕಗಳು ಆಯಾ ಪ್ರಶ್ನೆಗಳ ಪೂರ್ಣ ಗುಣಗಳು.

1. 'ಸ್ತ್ರೀವಾದ'ವು ಸುತ್ತಲಿನ ಪ್ರಪಂಚವನ್ನು ಬದಲಿಸುವ ಪ್ರಜ್ಞಾಪೂರ್ವಕ ಪ್ರಯತ್ನ – ಈ ಮಾತನ್ನು ನೇಮಿಚಂದ್ರರವರ ಲೇಖನವನ್ನಾಧರಿಸಿ ಬರೆಯಿರಿ. (10)

**(ಅಥವಾ)**

'ಸ್ತ್ರೀ ಮತವನುತ್ತರಿಸಲಾಗದೆ' ಎಂದು ದ್ರೌಪದಿ ಕೇಳಲು ಕಾರಣವಾದ ಪ್ರಸಂಗವನ್ನು ಕುರಿತು ಬರೆಯಿರಿ.

2. "ಹೆಣ್ಣಿನ ನೋವಿನ ಆಳವನ್ನು ಅರಿಯಲು ದೇವರು ಹೆಣ್ಣಾಗಲೇ ಬೇಕು"– ಈ ಮಾತನ್ನು 'ಪ್ರಭುವೇ ನೀನೊಮ್ಮೆ ಹೆಣ್ಣಾಗು' ಕವಿತೆಯಾಧರಿಸಿ ಬರೆಯಿರಿ. (10)

**(ಅಥವಾ)**

ಉಮಾಶ್ರೀಯವರ ವೈವಾಹಿಕ ಜೀವನ ಕುರಿತು ವಿವರಿಸಿರಿ.

3. ಬೇಕಾದ ಮೂರಕ್ಕೆ ಉತ್ತರಿಸಿರಿ. (3×5=15)
   i) ಭಾಗಿರಥಿ
   ii) ಸರ್ಕಸ್ ಹುಡುಗಿ
   iii) ಅಕ್ಕಮಹಾದೇವಿ
   iv) ಧನ್ಯವಾದಗಳು
   v) ಸತ್ಯಕ್ಕ

4. ಕನ್ನಡ ಭಾಷೆಯ ಅಳಿವು–ಉಳಿವಿನ ವಿಚಾರಗಳು ಚಂಪಾರವರ ಲೇಖನದಲ್ಲಿ ಹೇಗೆ ಮೂಡಿ ಬಂದಿವೆ? ವಿವರಿಸಿರಿ. (10)

**(ಅಥವಾ)**

ಕಾನೂನಾತ್ಮಕವಾಗಿ ಕನ್ನಡವನ್ನು ಆಡಳಿತ ಭಾಷೆಯಾಗಿ ಅನ್ವಯಗೊಳಿಸುವ ಪ್ರಯತ್ನ ಕೆ.ವಿ ನಾರಾಯಣರವರ ಲೇಖನದಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿರಿ

[P.T.O

5. 'ವ್ಯವಹಾರದಲ್ಲಿ ಕನ್ನಡ'– ಈ ಲೇಖನದ ಮಹತ್ವವನ್ನು ಕುರಿತು ಬರೆಯಿರಿ. (10)

(ಅಥವಾ)

ಲೇಖನ ಚಿನ್ಹೆಗಳ ಉಪಯೋಗವನ್ನು ತಿಳಿಸಿರಿ.

6. ಕೆಳಗಿನವುಗಳಲ್ಲಿ ಬೇಕಾದ **ಮೂರಕ್ಕೆ** ಟಿಪ್ಪಣಿ ಬರೆಯಿರಿ. (3×5=15)

i) ಕಂಪ್ಯೂಟರ್ ಮತ್ತು ಕನ್ನಡ ಭಾಷೆ.

ii) ಆಂಗ್ಲರ ಆಡಳಿತದಲ್ಲಿ ಕನ್ನಡ ಭಾಷೆ

iii) ಪೂರ್ಣ ವಿರಾಮ ಚಿನ್ಹೆ

iv) ವ್ಯವಹಾರ ಪತ್ರದ ವಿವಿಧ ಅಂಗಗಳು

v) ಚಂಪಾ.

7. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (10×1=10)

i) ಮಲ್ಲನಗೌಡ ಯಾವ ಊರಿನಲ್ಲಿ ಕೆರೆ ಕಟ್ಟಿಸಿದನು?

ii) ಕುಮಾರವ್ಯಾಸ ಭಾರತ ಯಾವ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ?

iii) 'ಶಂಭುಜಕ್ಕೇಶ್ವರಾ' ಎಂಬುದು ಯಾರ ವಚನಗಳ ಅಂಕಿತ?

iv) ಉಮಾಶ್ರೀಯವರು ಹುಟ್ಟಿದ ಊರು ಯಾವುದು?

v) ನೇಮಿಚಂದ್ರರವರ ವೃತ್ತಿ ಯಾವುದು?

vi) ಚಂಪಾರವರ ಜನ್ಮಸ್ಥಳ ಯಾವುದು?

vii) ಸುನೀಲ ಗಂಗೋಪಾಧ್ಯಾಯ ಯಾವ ಭಾಷೆಯ ಕವಿ?

viii) 'ಕೆವಿಎನ್' ಬರೆದಿರುವ ಆಡಳಿತ ಕನ್ನಡ ಲೇಖನವನ್ನು ಯಾವ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ?

ix) ಎಚ್ಚೆಸ್ಕೆಯವರ ಪೂರ್ಣ ಹೆಸರೇನು?

x) 'ಲೇಖನ ಚಿನ್ಹೆಗಳು' ಲೇಖನವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?

0082915

27102(New)

B.Sc./ B.C.A./B.H.Sc./B.F.T. I Semester Degree Examination Oct./Nov. -2019

# KANNADA BASIC

**ಕುರುಹು–1**

**ಹೊಸ ಪಠ್ಯಕ್ರಮ**

**(New)**

**Time : 3 Hours** **Maximum Marks : 80**

***Instructions to Candidates:***

1) ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣಗುಣಗಳು.

**1.** ಹೆಣ್ಣು ತಾನು ಎರಡನೆಯ ದರ್ಜೆಯ ಪ್ರಜೆ ಎನ್ನುವ ಮನಸ್ಥಿತಿಯಿಂದ ಹೊರ ಬಂದಾಗ ಮಾತ್ರ ಹೆಣ್ಣಿಗೆ ಬಿಡುಗಡೆಸಾಧ್ಯ. ವಿಜಯಾ ದಬ್ಬೆ ಅವರ ಲೇಖನವನ್ನಾಧರಿಸಿ ಬರೆಯಿರಿ. **(1×10=10)**

**(ಅಥವಾ)**

"ಗಂಡಿನ ಭೋಗ–ವೈರಾಗ್ಯಗಳಿಗೆ ಹೆಣ್ಣು ಹೇಗೆ ಕಾರಣಳು"? ನೀಲಾಂಜನೆಯ ನೃತ್ಯ ಪ್ರಸಂಗದ ಹಿನ್ನೆಲೆಯಲ್ಲಿ ಚರ್ಚಿಸಿರಿ.

**2.** ಹೆಣ್ಣಿನ ಸ್ಥಾನಮಾನ, ವ್ಯಕ್ತಿತ್ವ ಬದಲಾವಣೆ ಯಾಗಬೇಕಾದರೆ ಅದಕ್ಕೆ ಅವಳೇ ಪ್ರಯತ್ನಿಸಬೇಕು "ದಾಟಿ ಬಾ ನಿರ್ಭಯದ ನಿಲುವಿಗೆ" ಕವನದ ಹಿನ್ನೆಲೆಯಲ್ಲಿ ಚರ್ಚಿಸಿರಿ? **(1×10=10)**

**(ಅಥವಾ)**

ಶಾಂತಾ ಹುಬ್ಳೀಕರ ಅವರ ಸಾಧನೆಯ ದಾರಿ ಸುಗಮವಾಗಿರಲಿಲ್ಲ. "ನಾಳೀನ ಚಿಂತ್ಯಾಕ" ಆತ್ಮಕಥೆಯ ಹಿನ್ನೆಲೆಯಲ್ಲಿ ವಿವರಿಸಿರಿ.

**3.** ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

i) ನಾನು ಪುಟ್ಟಿ ಮಳೆ ನೋಡಿದ್ದು
ii) ಅಂಬಿಕಾತನಯದತ್ತ
iii) ಮಗಳು ಕವಿತೆಯ ಆಶಯ

**4.** 'ಜೇನ್ ಗುಡಾಲ'ರವರ ಜೀವನ ಮತ್ತು ಸಾಧನೆಗಳನ್ನು ಕುರಿತು ವಿವರಿಸಿರಿ. **(1×10=10)**

**(ಅಥವಾ)**

ಕೈಗಳಿಗೆ ಶ್ರಮ, ಚೈತನ್ಯ ಹಾಗೂ ಕ್ಷಮತೆಯನ್ನು ತಂದು ಕೊಟ್ಟ ಹೊಲಿಗೆಯಂತ್ರದ ಮಹತ್ವವನ್ನು ಕುರಿತು ವಿವರಿಸಿ.

P.T.O

5. ಜಾಗತೀಕರಣ ಮತ್ತು ವಾಣಿಜ್ಯೀಕರಣಗಳು ಮಾನವ ಕುಲದ ಮೌಲ್ಯವ್ಯವಸ್ಥೆಯನ್ನೇ ತಲೆಕೆಳಗೆ ಮಾಡುವಷ್ಟು ಶಕ್ತವಾಗಿದೆ ವಿವೇಕಶಾನಭಾಗ ಅವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿರಿ. **(1×10=10)**

**(ಅಥವಾ)**

ಎಂಡೋ ಸಲ್ಫಾನದಿಂದಾಗಬಹುದಾದ ಅಪಾಯಗಳನ್ನು ಕುರಿತು ನಾಗೇಶ ಹೆಗಡೆ ಅವರ ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿರಿ.

6. ಬೇಕಾದ ಎರಡಕ್ಕೆ ಟಿಪ್ಪಣಿ ಬರೆಯಿರಿ. **(2×5=10)**

i) ಹೆಡ್ ಹಂಟರ್

ii) ಪೂರ್ಣಚಂದ್ರ ತೇಜಸ್ವಿ

iii) ನಡೆಯುವಕಡ್ಡಿ! ಹಾರುವ ಎಲೆ!

7. ಬೇಕಾದ ಎರಡಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಣ ನೀಡಿರಿ. **(2×5=10)**

i) ರಘುನಾಥನಂತೆ, ಕೊಂಡಾಳುವವನಲ್ಲ ತಾನೆಂದು ರಜಕನುದ್ದಂಡದೊಳ್ ನುಡಿಯೆ

ii) ಎನಿಸಿದ ನೀಳಾಂಜನೆ ಕರ್ಬಿನ ಬಿಲ್ಲಂ ಮಸೆದ ಮದನನಲರ್ಗಣೆ

iii) ದ್ರೌಪದಿಯಂತೆ ಎಲ್ಲರಿಗೂ ಅಕ್ಷಯವಸ್ತ್ರ ಲಭಿಸುವುದೆಂಬ ನಂಬಿಕೆಯಿಲ್ಲ.

iv) ಹಿಡಿತಕ್ಕೂ ಈ ಹುಡುಗಿಗೂ ಉಡದನಂಟು ಉಣಿಸಲ್ಲಿ ಹಿಡಿತ, ಉಡುಗೆಯಲ್ಲಿಹಿಡಿತ.

8. ಒಂದೇ ವಾಕ್ಯದಲ್ಲಿ ಉತ್ತರಿಸಿರಿ. **(10×1=10)**

i) "ನಾರಿ–ದಾರಿ – ದಿಗಂತ" ಕೃತಿಯ ರಚನೆಕಾರರು ಯಾರು?

ii) ಪಂಪನ ಎರಡು ಕೃತಿಗಳನ್ನು ಹೆಸರಿಸಿರಿ?

iii) "ಕರ್ನಾಟಕ ಚೂತವನ ಚೈತ್ರ" ಎಂಬ ಬಿರುದನ್ನು ಪಡೆದ ಕವಿ ಯಾರು?

iv) ಕಾವ್ಯರ್ಥ ಚಿಂತನ' ಕೃತಿಯ ರಚನಕಾರರು ಯಾರು?

v) "ಅನುದಿನದ ಅಂತರಗಂಗೆ" ಇದು ಯಾವ ಕವಿಯ ಆತ್ಮಕಥೆ ಯಾಗಿದೆ?

vi) "ಬೆಳಕಿನೊಂದು ಕಿರಣ ಮೇರಿಕ್ಯೂರಿ" ಕೃತಿಯ ರಚನಕಾರರು ಯಾರು?

vii) "ಹರಿ ಚಿತ್ತ ಸತ್ಯ" ಕಾದಂಬರಿಯ ಕರ್ತೃ ಯಾರು?

viii) "ಸಕ್ಕರೆಗೊಂಬೆ" ನಾಟಕದ ರಚನಕಾರರು ಯಾರು"

ix) "ಕಿರಗೂರಿನ ಗಯ್ಯಾಳಿಗಳು" ಇದು ಯಾರ ಕೃತಿಯಾಗಿದೆ?

x) "ಇರುವುದೊಂದೇ ಭೂಮಿ" ಕೃತಿಯ ಕರ್ತೃ ಯಾರು?

---

0064674

22102(New)

**B.A./BSW I Semester Degree Examination Oct./Nov. -2019**

**KANNADA (Basic)**

**ಅರಿವು-1**

**ಹೊಸಪಠ್ಯಕ್ರಮ**

**(New)**

**Time : 3 Hours** **Maximum Marks : 80**

***Instructions to Candidates:***

1) ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.

2) ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

**1.** 'ಸ್ತ್ರೀ ಪುರುಷರಲ್ಲಿ ನಿಸರ್ಗ ಸಹಜವಾಗಿ ಇದ್ದ ಲಿಂಗಭೇದ ವೈಶಿಷ್ಟ್ಯಗಳೇ ಸಮಾಜ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ನೀತಿಯ ಕಾರಣಗಳಾಗಿದ್ದವು ಎಂಬುದು ಹೆಣ್ಣಿನ ಬದುಕಿನ ದುರಂತ, ಈ ವಾಕ್ಯವನ್ನು ಹೆಣ್ಣು ಎಂದರೆ ಯಾರು ಅಥವಾ ಏನು? ಎಂಬ ಲೇಖನದ' ಹಿನ್ನಲೆಯಲ್ಲಿ ಚರ್ಚಿಸಿ. **(1×10=10)**

**(ಅಥವಾ)**

ಭಾರತದ ಸನಾತನ ಸಮಾಜದಲ್ಲಿ ಕರುಳಿಗಿಂತ ಕುಲದೊಡ್ಡದು, ತಾಯ್ತನಕ್ಕಿಂತ ಸಿಂಹಾಸನ ದೊಡ್ಡದು ಎಂಬಮಾತನ್ನು ಪಂಪನ ಇರದಡಿಯೆತ್ತಿಂ ಕಾವ್ಯದ ಮೂಲಕ ವಿವರಿಸಿರಿ.

**2.** ಸ್ತ್ರೀಯರು ತಮ್ಮ ಚರಿತ್ರೆ ಮತ್ತು ಭವಿಷ್ಯ ಎರಡನ್ನು ತಾವೆ ಕಟ್ಟಿಕೊಳ್ಳಬೇಕಿದೆ ಎಂಬ ಕವಯಿತ್ರಿಯ ಮಾತನ್ನು ನಿಮ್ಮ ಪುರುಷ ಸೂಕ್ತದಲ್ಲಿ' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ. **(1×10=10)**

**(ಅಥವಾ)**

ಹಾಡುವ ಕಲೆಯಿಂದ ಸಂಸಾರ ನಡೆಸಿದ ರಾಜಮ್ಮನ ವ್ಯಕ್ತಿತ್ವ 'ಹಾಡುವ ಹಕ್ಕಿಯ ಶೋಕಗೀತೆ' ಆತ್ಮಕಥೆಯಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.

**3.** ಕೆಳಗಿನವುಗಳಲ್ಲಿ ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

i) ಪುಟ್ಟ ವಿಧವೆ

ii) ಶಶಿಕಲಾ ವೀರಯ್ಯಸ್ವಾಮಿ

iii) ಜೀವ ಮಿಡಿತದ ಸದ್ದು

**4.** 'ಯುದ್ಧದಿಂದ ಯಾವ ಯಶಸ್ಸು ಇಲ್ಲ. ಯುದ್ಧದ ವ್ಯಾಪಾರವು ಯಾರಿಗೂ ಲಾಭ ತರದು' ಎಂಬ ಗಾಂಧರಿಯ ಎಚ್ಚರಿಕೆಯ ಮಾತಿನ ಹಿನ್ನೆಲೆಯಲ್ಲಿ 'ಸಮರ ವ್ಯಾಪಾರಂ ಮಾಣ್ದುಮಗನೆ' ಎಂಬ ಕವಿತೆಯ ಮೂಲಕ ವಿವರಿಸಿ. **(1×10=10)**

**(ಅಥವಾ)**

'ಜಾಗತಿಕರಣ ಮತ್ತು ಮುಕ್ತ ಮಾರುಕಟ್ಟೆಗಳ ಅಪಾಯವನ್ನು' ಶಬ್ದವಿಲ್ಲದ ಯುದ್ಧ ಲೇಖನದ ಮೂಲಕ ವಿವರಿಸಿ.

5. ಯುದ್ಧವು ಮನುಷ್ಯರನ್ನಷ್ಟೆ ಅಲ್ಲ. ಪ್ರಾಣಿಗಳನ್ನು ಸಹ ಅಸದಳ ಸಂಕಟಕ್ಕೆ ದೂಡುತ್ತದೆ ಎಂಬುದನ್ನು 'ವೀರನ ಕಂಕರ' ಪದ್ಯವು ಹೇಗೆ ನಿರೂಪಿಸುತ್ತದೆ? ವಿವರಿಸಿ. **(1×10=10)**

**(ಅಥವಾ)**

ಪ್ರಭುತ್ವದಾಹಿಗಳ ಕೋಮು ಭಾವನೆಗೆ ಜನ ಸಾಮಾನ್ಯರು ಬಲಿ ಬೀಳದೆ ಪರಸ್ಪರ ಗೌರವಿಸಿಕೊಂಡು ಹೋಗುವುದನ್ನು **'ಕೊಂದಹರುಳಿದರೆ'** ಕಥೆಯಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.

6. ಕೆಳಗಿನವುಗಳಲ್ಲಿ ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×5=10)**

   i) ಕುವೆಂಪು

   ii) ಗಜಲ್

